# ಕರ್ನಾಟಕ ವಿಧಾನ ಪರಿಷತ್ತು

| | | | |
|---|---|---|---|
| 1 | ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 775 |
| 2 | ಸದಸ್ಯರ ಹೆಸರು | : | ಶ್ರೀ ಗೋವಿಂದರಾಜು (ವಿಧಾನ ಸಭಾ ಕ್ಷೇತ್ರ) |
| 3 | ಉತ್ತರಿಸುವ ದಿನಾಂಕ | : | 13-03-2025 |
| 4 | ಉತ್ತರಿಸುವವರು | : | ಉಪ ಮುಖ್ಯಮಂತ್ರಿಗಳು |

| ಕ್ರ ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಬೆಂಗಳೂರು ನಗರದಲ್ಲಿ ಆಪ್ಟಿಕಲ್ ಫೈಬರ್ ಕೇಬಲ್‌ಗಳನ್ನು ಅಳವಡಿಸಬೇಕಿದ್ದರೆ ಬಿ.ಬಿ.ಎಂ.ಪಿ ಅನುಮತಿ ಅವಶ್ಯಕತೆ ಇದೆಯೇ; ಹಾಗಿದ್ದಲ್ಲಿ ಅನುಮತಿ ನೀಡುವ ಸಂದರ್ಭದಲ್ಲಿ ಪಾಲಿಕೆ ಅನುಸರಿಸುತ್ತಿರುವ ನೀತಿ ನಿಯಮಗಳೇನು; | ಬಿಬಿಎಂಪಿ ವ್ಯಾಪ್ತಿಯಲ್ಲಿ ಓ.ಎಫ್.ಸಿ ಅಳವಡಿಕೆ ಸಾಮಾನ್ಯ ನಿಗದಿತ ಕಾರ್ಯವಿಧಾನದಂತೆ **ಅನುಬಂಧ-ಎ** ರಲ್ಲಿ ಒದಗಿಸಿದೆ. |
| ಆ) | ಕೇಬಲ್ ವೈರ್ ಮತ್ತು ಭೂಮಿಯನ್ನು ಅಗೆದು ಹಾಕಲಾಗುವ ಕೇಬಲ್‌ಗಳಿಂದ ಪಾಲಿಕೆಗೆ ಇದುವರೆಗೂ ಸಂದಾಯವಾಗಿರುವ ಹಣ ವೆಷ್ಟು; ಹಾಗೂ ಸಂದಾಯ ಮಾಡಿರುವ ಕಂಪನಿಯ ಹೆಸರು ಮತ್ತು ಮೊತ್ತ ವೆಷ್ಟು; | ಓ.ಎಫ್.ಸಿ ಆರಂಭವಾಗಿನಿಂದ ತಹಲ್‌ವರೆಗೆ ಭೂಗತ ಕೇಬಲ್ ಗಳನ್ನು ಅಳವಡಿಸಲು ಸೇವಾ ಸಂಸ್ಥೆವಾರು ಪಡೆದಿರುವ ಶುಲ್ಕಗಳ ವಿವರಗಳನ್ನು **ಅನುಬಂಧ-ಬಿ ರಲ್ಲಿ ಒದಗಿಸಿದೆ.** |
| ಇ) | 2019ರಲ್ಲಿ ಬಿ.ಬಿ.ಎಂ.ಪಿ ಆಯುಕ್ತರು ಹೊರಡಿಸಿದ್ದ ಆದೇಶದಲ್ಲಿ ನಿಗದಿಪಡಿಸಿರುವ ಶುಲ್ಕಕ್ಕಿಂತ ಕಡಿಮೆ ಶುಲ್ಕ ವಸೂಲಿ ಮಾಡಿರುವುದರಿಂದ ಮೂರು ವರ್ಷಗಳ ಅವಧಿಯಲ್ಲಿ ಪಾಲಿಕೆಗೆ ಸುಮಾರು 88.65 ಕೋಟಿ ರೂ. ನಷ್ಟವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಹಾಗಿದ್ದಲ್ಲಿ ಇದರ ಬಗ್ಗೆ ಯಾವ ಕ್ರಮ ಕೈಗೊಳ್ಳಲಾಗಿದೆ (ಆದೇಶದ ಪ್ರತಿ ಒದಗಿಸುವುದು) | • ಲೆಕ್ಕ ಪರಿಶೋಧಕರು ಬಿಬಿಎಂಪಿಯ ಆದೇಶ ಸಂಖ್ಯೆ: ಆಯುಕ್ತರು/ಪಿಎಸ್‌ಆರ್/(ಜಿ)/2684/2018-19, ದಿನಾಂಕ: 17-09-2018 ಅನ್ನು ಉಲ್ಲೇಖಿಸಿ ಆಕ್ಷೇಪಿಸಿರುವಂತೆ ಓ.ಎಫ್.ಸಿ ಅಳವಡಿಕೆ ನಿಗಧಿತ ಶುಲ್ಕಕಿಂತ ಕಡಿಮೆ ಶುಲ್ಕ ವಸೂಲಿಸಿ ಆದಾಯ ನಷ್ಟವಾಗಿರುವುದು ಎಂದು ತಿಳಿಸಿರುವ ಮೊತ್ತವು ಭದ್ರತಾ ಠೇವಣಿಯ ಮೊತ್ತವಾಗಿದ್ದು, ಭದ್ರತಾ ಠೇವಣಿಯು ಪಾಲಿಕೆಗೆ ಆದಾಯವಾಗಿರುವುದಿಲ್ಲ. ಬದಲಿಗೆ ಸಂಸ್ಥೆಗಳಿಗೆ ಹಿಂತಿರುಗಿಸುವ ಮೊತ್ತವಾಗಿದ್ದು ಇದರಿಂದ ಪಾಲಿಕೆಗೆ ಯಾವುದೇ ರೀತಿಯ ಆದಾಯ ನಷ್ಟವಾಗಿರುವುದಿಲ್ಲ. |

| | | |
|---|---|---|
| ಈ) | ಇತ್ತೀಚೆಗೆ ನಗರದ ಎಲ್ಲಾ ವಿದ್ಯುತ್ ಕಂಬ ಹಾಗೂ ಮನೆಗಳ ಮಹಡಿಗಳ ಮೇಲೆ ಅನಧಿಕೃತವವಾಗಿ ಕೇಬಲ್ ವೈರ್‌ಗಳನ್ನು ಹಾಕಿರುವುದು ಪಾಲಿಕೆಯ ಗಮನಕ್ಕೆ ಬಂದಿದೆಯೇ; | ಬಂದಿರುತ್ತದೆ. |
| ಉ) | ಬಂದಿದ್ದಲ್ಲಿ ತೆಗೆದುಕೊಂಡ ಕ್ರಮಗಳನ್ನು ನಗರದ ಎಲ್ಲಾ ಭಾಗಗಳಲ್ಲೂ ಕೇಬಲ್ ವೈರ್‌ಗಳು ನೇತಾಡುತ್ತಿರುವುದನ್ನು ಅಧಿಕಾರಿಗಳು ಗಮನಹರಿಸಲಿಲ್ಲವೇ, ರಸ್ತೆ ಬದಿಯ ಮರದಿಂದ ಮರಕ್ಕೆ ಮತ್ತು ಬೀದಿ ದೀಪಗಳ ಕಂಬಗಳಿಗೆ ಕೇಬಲ್‌ಗಳು ನೇತಾಡುತ್ತಿರುವುದರಿಂದ ನಗರದ ಸೌದರ್ಯಕ್ಕೆ ಹಾಗೂ ಜೀವಗಳಿಗೆ ಮಾರಣಾಂತಕವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಪಾಲಿಕೆ ವ್ಯಾಪ್ತಿಯಲ್ಲಿ ರಸ್ತೆ ಬದಿಯ ಮರದಿಂದ ಮರಕ್ಕೆ ಮತ್ತು ಬೀದಿ ದೀಪಗಳ ಕಂಬಗಳ ಮೇಲೆ ಓ.ಎಫ್.ಸಿ ಕೇಬಲ್‌ಗಳನ್ನು ಅಳವಡಿಸಲಾಗಿರುವುದನ್ನು ಆಗ್ಗಿಂದಾಗೆ ಕಾರ್ಯಾಚರಣೆ ಕೈಗೊಂಡು ತೆರವುಗೊಳಿಸಲಾಗುತ್ತಿರುತ್ತದೆ. |
| ಊ) | ರಸ್ತೆಗಳನ್ನು ಅಗೆದು ಹಾಕಲಾಗಿರುವ ಕೇಬಲ್‌ಗಳನ್ನು ಅಳವಡಿಸಿದ ನಂತರ ಅಗೆದಿರುವ ರಸ್ತೆಗಳನ್ನು ಮುಚ್ಚಬೇಕಾಗಿರುವ ಜವಾಬ್ದಾರಿ ಹಾಗೂ ಹಲವಾರು ಕಡೆಗಳಲ್ಲಿ ಗುಂಡಿಗಳನ್ನು ಮುಚ್ಚಿರುವುದಿಲ್ಲ ಹಾಗೂ ಡಾಂಬರನ್ನು ಸಹ ಹಾಕಿರುವುದಿಲ್ಲ; ಇದರ ಪರಿಶೀಲನೆಯ ಕಾರ್ಯವನ್ನು ಕೈಗೊಳ್ಳಬೇಕಾದ ಅಧಿಕಾರಿ ಯಾರು? | • ಓ.ಎಫ್.ಸಿ ಕೇಬಲ್‌ಗಳನ್ನು ಅಳವಡಿಸಲು ಎಚ್.ಡಿ.ಡಿ ಮಾದರಿಯಲ್ಲಿ ಅನುಮತಿ ನೀಡಲಾಗುತ್ತಿದ್ದು, ಓಪನ್ ಟ್ರೆಂಚ್ ಮಾದರಿಯಲ್ಲಿ ಕೇಬಲ್ ಅಳವಡಿಸಲು ಅನುಮತಿ ನೀಡುವುದಿಲ್ಲ.<br>• ಕೇಬಲ್‌ಗಳನ್ನು ಅಳವಡಿಸಿದ ನಂತರ ರಸ್ತೆಯನ್ನು ಮೋಟರೆಬಲ್ ಮಾಡುವುದು ಸೇವಾ ಸಂಸ್ಥೆಯವರ ಜವಾಬ್ದಾರಿಯಾಗಿರುತ್ತದೆ.<br>• ಓ.ಎಫ್.ಸಿ ಕೇಬಲ್‌ಗಳನ್ನು ಅಳವಡಿಸಿದ ಗುಂಡಿಗಳನ್ನು ಡಾಂಬರಿಕರಣ ಮಾಡುವುದು ಬಿಬಿಎಂಪಿಯ ಜವಾಬ್ದಾರಿಯಾಗಿದ್ದು, ಬಿಬಿಎಂಪಿಗೆ ರಸ್ತೆ ಪುನಶ್ಚೇತನ ಶುಲ್ಕವನ್ನು ಸೇವಾ ಸಂಸ್ಥೆಯವರು ಪಾವತಿಸಿರುತ್ತಾರೆ. ಇದರ ಪರಿಶೀಲನೆಯನ್ನು ಸಂಬಂಧಪಟ್ಟ ಕಾರ್ಯವ್ಯಾಪ್ತಿಯ ಅಭಿಯಂತರರ ಜವಾಬ್ದಾರಿಯಾಗಿರುತ್ತದೆ. |

**ಸಂಖ್ಯೆ: ನಅಇ 94 ಎಂಎನ್‌ಯು 2025**

**(ಡಿ.ಕೆ. ಶಿವಕುಮಾರ್)**
ಉಪ ಮುಖ್ಯಮಂತ್ರಿ

ಅನುಬಂಧ - [illegible]

# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಆಯುಕ್ತರ ಕಛೇರಿ, ಎನ್.ಆರ್.ವೃತ್ತ ಬೆಂಗಳೂರು-560002

ಸಂಖ್ಯೆ:ಆಯುಕ್ತರು/ಪಿಎಸ್‌ಆರ್(ಜಿ)/[illegible] /2018-19 ದಿನಾಂಕ: ೧೭/೦೯/೨೦೧೮

## ಕಛೇರಿ ಆದೇಶ

ವಿಷಯ:- ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಓ.ಎಫ್.ಸಿ ಅಳವಡಿಕೆಗೆ ಪರಿಷ್ಕೃತ ಶುಲ್ಕ, ದಂಡ ಮತ್ತು ನಿಯಮಾವಳಿ ಕುರಿತು ಕ್ರೋಢೀಕೃತ ಆದೇಶ.

ಉಲ್ಲೇಖ:- 1.ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯವರ ದಿನಾಂಕ: 13-10-2017ರ ವಿಷಯದ ಸಂಖ್ಯೆ: ತೆಆಸ್ಥಾಸ/113/2017-18ರ ನಿರ್ಣಯ
2. ದಿನಾಂಕ: 29-06-2018 ರಂದು ನಡೆದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ವಿಷಯದ ಸಂಖ್ಯೆ: 02(247)/2017-18.

******

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಓ.ಎಫ್.ಸಿ ಅಳವಡಿಕೆ ಸಂದರ್ಭದಲ್ಲಿ ಕೆ.ಎಂ.ಸಿ ಕಾಯ್ದೆಯ ಅನ್ವಯ ಸದರಿ ಶುಲ್ಕ ದಂಡ ಮತ್ತು ನಿಯಮಾವಳಿಗಳಿಗೆ ಶಾಸನಾತ್ಮಕ ಅನುಮೋದನೆಯನ್ನು ಪಡೆಯುವ ಬಗ್ಗೆ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಹಾಗೂ ಪಾಲಿಕೆ ಸಭೆಯ ಮುಂದೆ ಮಂಡಿಸಲಾದ ಆಯುಕ್ತರವರ ದಿನಾಂಕ: 08-09-2017ರ ಟಿಪ್ಪಣಿಯನ್ನು, ಹಲವು ಮಾರ್ಪಡುಗಳೊಂದಿಗೆ ಒಪ್ಪಿರುವ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ದಿನಾಂಕ: 13-10-2017ರ ನಿರ್ಣಯ ಮತ್ತು ದಿನಾಂಕ: 29-06-2018 ರಂದು ನಡೆದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ವಿಷಯದ ಸಂಖ್ಯೆ: 02(247)/2017-18ರ ಅನ್ವಯ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಓ.ಎಫ್.ಸಿ ಅಳವಡಿಕೆಗೆ ಪರಿಷ್ಕೃತ ಶುಲ್ಕ, ದಂಡ ಮತ್ತು ನಿಯಮಾವಳಿ ಕುರಿತು ಈ ಕೆಳಗಿನಂತೆ ಆದೇಶಿಸಿದೆ.

**ಓ.ಎಫ್.ಸಿ ಅಳವಡಿಕೆ ಶುಲ್ಕ:-**

| ಕ್ರ.ಸಂ | ವಿವರ | ಶುಲ್ಕ (ರೂ.ಪ್ರತಿ ಮೀ) |
|---|---|---|
| | **ಸಾಮಾನ್ಯ ಸಂದರ್ಭಗಳು** | |
| 1 | ಓ.ಎಫ್.ಸಿ. ಡಕ್ಟ್ ಅಳವಡಿಕೆಗೆ ಪರವಾನಗಿ ಶುಲ್ಕ: ಟೆಲಿಕಾಂ ಮತ್ತು ನಾನ್-ಟೆಲಿಕಾಂ ಸಂಸ್ಥೆಗಳಿಗೆ ಹೆಚ್.ಡಿ.ಡಿ. ಮಾದರಿಯಲ್ಲಿ ಓ.ಎಫ್.ಸಿ. ಡಕ್ಟ್ ಅಳವಡಿಕೆಗ ಒಂದು ಸಲಕ್ಕೆ ಮೊದಲ ಮೂರು ಡಕ್ಟ್‌ಗಳಿಗೆ | 600/- |
| 2 | ಓ.ಎಫ್.ಸಿ. ಡಕ್ಟ್ ಅಳವಡಿಕೆಗೆ ಪರವಾನಗಿ ಶುಲ್ಕ: ಟೆಲಿಕಾಂ ಮತ್ತು ನಾನ್-ಟೆಲಿಕಾಂ ಸಂಸ್ಥೆಗಳಿಗೆ ಹೆಚ್.ಡಿ.ಡಿ. ಮಾದರಿಯಲ್ಲಿ ಓ.ಎಫ್.ಸಿ. ಡಕ್ಟ್ ಅಳವಡಿಕೆಗೆ ಒಂದು ಸಲಕ್ಕೆ ಮೂರಕ್ಕಿಂತ ಹೆಚ್ಚುವರಿ ಡಕ್ಟ್ ಅಳವಡಿಸುತ್ತಿದ್ದರೆ ಪ್ರತಿ ಹೆಚ್ಚುವರಿ ಡಕ್ಟ್‌ಗೆ | 100/- |
| 3 | ವೈಟ್ ಟಾಪಿಂಗ್ ಮತ್ತು ಟೆಂಡರ್ ಶ್ಯೂರ್ ರಸ್ತೆಗಳಲ್ಲಿ ಪಾಲಿಕೆಯಿಂದಲೇ ಸ್ಥಾಪಿಸಲಾಗಿರುವ ಓ.ಎಫ್.ಸಿ ಡಕ್ಟ್‌ಗಳಲ್ಲಿ ಓ.ಎಫ್.ಸಿ ಕೇಬಲ್ ಅಳವಡಿಕೆಗೆ ಪರವಾನಗಿ ಶುಲ್ಕ : ಟೆಲಿಕಾಂ ಮತ್ತು ನಾನ್-ಟೆಲಿಕಾಂ ಸಂಸ್ಥೆಗಳಿಗೆ 192 ರವರೆಗಿನ | 1500/- |

| ಕ್ರ.ಸಂ | ವಿಷಯ | ಶುಲ್ಕ (ರೂ.ಪ್ರತಿ ಮೀ) |
|---|---|---|
| | ಫೈಬರ್ ಹೊಂದಿರುವ ಪ್ರತಿ ಕೇಬಲ್‌ಗೆ.<br>ವಿ.ಸೂ:192 ಕ್ಕಿಂತ ಹೆಚ್ಚು ಫೈಬರ್ ಹೊಂದಿರುವ ಕೇಬಲ್‌ಗಳಿಗೆರೂ.2000/- ಪ್ರತಿ (ಮೀ ಶುಲ್ಕ ವಿಧಿಸುವುದು) | |
| 4 | ಓ.ಎಫ್.ಸಿ. ಡಕ್ಟ್ ಅಳವಡಿಕೆಗೆ ಪರವಾನಗಿ ಶುಲ್ಕ: ಇಂಟರ್ನೆಟ್ ಸೇವಾ ಸಂಸ್ಥೆಗಳಿಗೆ ಹೆಚ್.ಡಿ.ಡಿ. ಮಾದರಿಯಲ್ಲಿ ಓ.ಎಫ್.ಸಿ. ಡಕ್ಟ್ ಅಳವಡಿಕೆಗೆ ಒಂದು ಸಲಕ್ಕೆ ಮೊದಲ ಮೂರು ಡಕ್ಟ್‌ಗಳಿಗೆ | 200/- |
| 5 | ಓ.ಎಫ್.ಸಿ. ಡಕ್ಟ್ ಅಳವಡಿಕೆಗೆ ಪರವಾನಗಿ ಶುಲ್ಕ: ಇಂಟರ್ನೆಟ್ ಸೇವಾ ಸಂಸ್ಥೆಗಳಿಗೆ ಹೆಚ್.ಡಿ.ಡಿ. ಮಾದರಿಯಲ್ಲಿ ಓ.ಎಫ್.ಸಿ. ಡಕ್ಟ್ ಅಳವಡಿಕೆಗೆ ಒಂದು ಸಲಕ್ಕೆ ಮೂರಕ್ಕಿಂತ ಹೆಚ್ಚು ಡಕ್ಟ್ ಅಳವಡಿಸುತ್ತಿದ್ದರೆ ಪ್ರತಿ ಹೆಚ್ಚುವರಿ ಡಕ್ಟ್‌ಗೆ | 100/- |
| 6 | ಓ.ಎಫ್.ಸಿ. ಡಕ್ಟ್ ಅಳವಡಿಕೆಗೆ ಭದ್ರತಾ ಠೇವಣಿ: ಟೆಲಿಕಾಂ ಮತ್ತು ನಾನ್-ಟೆಲಿಕಾಂ ಸಂಸ್ಥೆಗಳಿಗೆ ಮತ್ತು ಇಂಟರ್ನೆಟ್ ಸೇವಾ ಸಂಸ್ಥೆಗಳಿಗೆ | ಅಳವಡಿಕೆ ಶುಲ್ಕದ 25% |
| 7 | ಓ.ಎಫ್.ಸಿ ಡಕ್ಟ್ ಅಳವಡಿಕೆಗೆ ಮೇಲ್ವಿಚಾರಣ ಶುಲ್ಕ : ಟೆಲಿಕಾಂ ಮತ್ತು ನಾನ್-ಟೆಲಿಕಾಂ ಸಂಸ್ಥೆಗಳಿಗೆ | 100/- |
| 8 | ಓ.ಎಫ್.ಸಿ ಡಕ್ಟ್ ಅಳವಡಿಕೆಗೆ ಮೇಲ್ವಿಚಾರಣೆ ಶುಲ್ಕ : ಇಂಟರ್ನೆಟ್ ಸೇವಾ ಸಂಸ್ಥೆಗಳಿಗೆ | 75/- |
| 9 | ಓ.ಎಫ್.ಸಿ ಜಂಕ್ಷನ್ ಬಾಕ್ಸ್ ಅಳವಡಿಕೆಗೆ ಪ್ರತಿ ಜಂಕ್ಷನ್ ಬಾಕ್ಸ್‌ಗೆ | 3000/- |
| 10 | ಓ.ಎಫ್.ಸಿ ಜಂಕ್ಷನ್ ಬಾಕ್ಸ್ ಅಳವಡಿಕೆಗೆ ಬಳಸುವ ಪ್ರತಿ ಪಿಲ್ಲರ್ ಅಥವಾ ಪೋಲ್‌ಗಳಿಗೆ(ಈ ಪಿಲ್ಲರ್ / ಪೋಲ್‌ಗಳನ್ನು ಜಂಕ್ಷನ್ ಬಾಕ್ಸ್ ಅಳವಡಿಸದ ಹೊರತು ಅಳವಡಿಸುವಂತಿಲ್ಲ). | 1500/- |

ಮೇಲ್ಕಾಣಿಸಿದಂತೆ ಶುಲ್ಕವನ್ನು ವಿಧಿಸುವಾಗ ಸಂಸ್ಥೆಗಳು ಸದರಿ ಅಳವಡಿಕೆಗೆ ಮುನ್ನ ಓ.ಎಫ್.ಸಿ ಅಥವಾ ಪೋಲ್ ಅಥವಾ ಇತರ ಅಳವಡಿಕೆ ಅನುಮತಿಯನ್ನು ಇದೇ ಸ್ಥಳಗಳಿಗೆ ಪಡೆದುಕೊಂಡಿದ್ದಲ್ಲಿ ಮತ್ತು ಈ ಬಗ್ಗೆ ದಾಖಲೆ ಹಾಗೂ ಮನವಿಯನ್ನು ಸಂಸ್ಥೆಗಳು ಸಲ್ಲಿಸಿದಲ್ಲಿ, ಅಂತಹ ಅನುಮತಿಗಳಿಗೆ ಈಗಾಗಲೇ ಪಾಲಿಕೆಗೆ ಪ್ರತಿ ಮೀ.ಉದ್ದದ ಅಳವಡಿಕೆಗೆ ಪಾವತಿಸಿರುವ ಅಳವಡಿಕೆ ಶುಲ್ಕದ ಮೊತ್ತವನ್ನು ಮಾತ್ರ ಹೊಂದಾಣಿಕೆ ಮಾಡುವುದು. ಅಲ್ಲದೇ ಪರವಾನಿಗೆಗಾಗಿ ಪಾಲಿಕೆಯನ್ನು ಹೊರತುಪಡಿಸಿ ಇತರ ಸ್ಥಳೀಯ, ಸರ್ಕಾರಿ ಅಥವಾ ಖಾಸಗಿ ಸಂಸ್ಥೆಗಳಿಗೆ ಪಾವತಿಸಿರುವ ಮೊತ್ತವನ್ನು ಪರಿಗಣಿಸುವಂತಿಲ್ಲ.

ಪಾಲಿಕೆ ಪರವಾನಿಗೆಯೊಂದಿಗೆ ಓ.ಎಫ್.ಸಿಯನ್ನು ಭೂಗತವಾಗಿ ಅಳವಡಿಸಿ ಕಾರಣಾಂತರಗಳಿಂದ ಓ.ಎಫ್.ಸಿ ಹಾಳಾಗಿದ್ದು ದುರುಸ್ತಿ ಸಾಧ್ಯವಾಗದ ಪಕ್ಷದಲ್ಲಿ ಹೊಸದಾಗಿ ಓ.ಎಫ್.ಸಿ ಡಕ್ಟ್ ಅಳವಡಿಸಲು ಡಕ್ಟ್‌ಗೆ ನಿಗಧಿತ ಪರವಾನಗಿ ಶುಲ್ಕ, ಮೇಲ್ವಿಚಾರಣೆ ಶುಲ್ಕ ಮತ್ತು ಭದ್ರತಾ ಠೇವಣಿ ಹೊಸದಾಗಿ ಪಡೆದು ಪರವಾನಗಿ ನೀಡುವುದು.

**ದಂಡ ಮತ್ತು ಇತರ ನಿಯಮಾವಳಿ:**

1. ಪಾಲಿಕೆಯ 2017–18 ರ ಆಯವ್ಯಯದಲ್ಲಿ ಘೋಷಿಸಿರುವಂತೆ ಅನುಮತಿಯಿಲ್ಲದೇ ರಸ್ತೆ ಕತ್ತರಿಸಿರುವ ಸಂಸ್ಥೆಗಳಿಂದ ರಸ್ತೆ ಪುನರ್ ನಿರ್ಮಾಣ ಮಾಡಿಸುವುದಲ್ಲದೆ ಪ್ರತಿ ಘಟನೆಗೆ ಖಾಸಗಿ ಮತ್ತು ಸರ್ಕಾರಿ ಸಂಸ್ಥೆಗಳಿಗೆ ರಸ್ತೆ ರೂ.25.00 ಲಕ್ಷ ಮತ್ತು ಸಾರ್ವಜನಿಕರಿಗೆ ರೂ.10.00 ಲಕ್ಷ ದಂಡ ವಿಧಿಸುವುದು.
2. ರಸ್ತೆಗಳಲ್ಲಿ ಡಾಂಬರೀಕರಣದ ಪೂರ್ವದಲ್ಲೇ ರಸ್ತೆ ಕತ್ತರಿಸುವ ಅನುಮತಿ ದೊರೆತಿದ್ದರೂ ಕೂಡ ಅನುಮತಿ ದೊರೆತು ರಸ್ತೆ ಕತ್ತರಿಸುವ ಮೊದಲೇ ರಸ್ತೆ ಡಾಂಬರೀಕರಣ ಕೈಗೊಂಡರೆ,

ಪಡೆದಿರುವ ಅನುಮತಿ ಕೂಡಲೇ ಅಸಿಂಧುವಾಗುತ್ತದೆ. ಇದನ್ನು ಉಲ್ಲಂಘಿಸಿ ಹೊಸದಾಗಿ ಡಾಂಬರೀಕರಣಗೊಳಿಸಿರುವ ರಸ್ತೆಯನ್ನು ಕತ್ತರಿಸಿದರೆ ರಸ್ತೆ ಕತ್ತರಿಸಿರುವ ಸಂಸ್ಥೆಗಳಿಂದ ರಸ್ತೆ ಪುನರ್ ನಿರ್ಮಾಣ ಮಾಡಿಸುವುದಲ್ಲದೆ ಪ್ರತಿ ಘಟನೆಗೆ ಖಾಸಗಿ ಮತ್ತು ಸರ್ಕಾರಿ ಸಂಸ್ಥೆಗಳಿಗೆ ರಸ್ತೆ ರೂ.25.00 ಲಕ್ಷ ಮತ್ತು ಸಾರ್ವಜನಿಕರಿಗೆ ರೂ.10.00 ಲಕ್ಷ ದಂಡ ವಿಧಿಸುವುದು.

3. ಓ.ಎಫ್.ಸಿ ಅನುಮತಿ ಪತ್ರಗಳಲ್ಲಿ ನಿಗಧಿ ಪಡಿಸಿರುವ ಸಂಖ್ಯೆಯ ಹೆಚ್.ಡಿ.ಡಿ ಅಳವಡಿಕೆ ಗುಂಡಿಗಳಿಗಿಂತ ಹೆಚ್ಚು ಗುಂಡಿಗಳನ್ನು ತೋಡಿದ್ದಲ್ಲಿ ಸದರಿ ರಸ್ತೆ ಭಾಗದ ಪುನರ್ ನಿರ್ಮಾಣ ಆಯಾ ಸಂಸ್ಥೆಗಳಿಂದಲೇ ಮಾಡಿರುವುದಲ್ಲದೆ ಪ್ರತಿ ಹೆಚ್ಚುವರಿ ಗುಂಡಿಗೆ ರೂ.10,000/- ದಂಡ ವಿಧಿಸುವುದು.
4. ನಿಗಧಿಯಾದ ಉದ್ದಕ್ಕಿಂತ ಹೆಚ್ಚಿನ ಓ.ಎಫ್.ಸಿ ಅಳವಡಿಕೆಯಾದಲ್ಲಿ ಹೆಚ್ಚುವರಿ ಉದ್ದಕ್ಕೆ ಅಥವಾ ಹೆಚ್ಚುವರಿ ಕೇಬಲ್ ಮತ್ತು ಡಕ್ಟ್ ಅಳವಡಿಸಿದ್ದಲ್ಲಿ ಪ್ರತಿ ಮೀಟರಿಗೆ ನಿಗಧಿತ ಶುಲ್ಕದ ಮೂರು ಪಟ್ಟು ದಂಡ ವಸೂಲು ಮಾಡುವುದು.
5. ಓ.ಎಫ್.ಸಿ ಅಳವಡಿಕೆ ಪೂರ್ಣಗೊಂಡ 96 ಘಂಟೆಗಳಲ್ಲಿ ಹೆಚ್.ಡಿ.ಡಿ ಅಳವಡಿಕೆ ಗುಂಡಿಗಳ ರಸ್ತೆ ಪುನಶ್ಚೇತನ ಪೂರ್ಣಗೊಳ್ಳದ ಪಕ್ಷದಲ್ಲಿ ಪ್ರತಿ ಗುಂಡಿಗೆ ಪ್ರತಿ ದಿನಕ್ಕೆ ರೂ.10,000/- ದಂಡ ವಿಧಿಸುವುದು.
6. ಓ.ಎಫ್.ಸಿ ಅಳವಡಿಕೆ ಅನುಮತಿ ಪಡೆದಿರುವ ಸಂದರ್ಭಗಳಲ್ಲಿ ಜುರಿಸ್‌ಡಿಕ್ಷನಲ್ ಇಂಜಿನಿಯರ್‌ಗಳಿಗೆ ಲಿಖಿತ ಪೂರ್ವ ಮಾಹಿತಿ ನೀಡುವುದು ಕಡ್ಡಾಯವಾಗಿದ್ದು, ಪೂರ್ವ ಮಾಹಿತಿ ನೀಡದ ಸಂಸ್ಥೆಗಳಿಗೆ ಸದರಿ ಅನುಮತಿಗೆ ಪಾವತಿಸಿರುವ ಮೇಲ್ವಿಚಾರಣಾ ಶುಲ್ಕದ 25% ನ್ನು ದಂಡವಾಗಿ ವಿಧಿಸುವುದು.
7. ಓ.ಎಫ್.ಸಿ ಅಳವಡಿಕೆಯನ್ನು ಓಪನ್ ಟ್ರೆಂಚ್ ಮಾದರಿಯಲ್ಲಿ ಮಾಡುವುದನ್ನು ನಿಷೇಧಿಸಲಾಗಿದ್ದು ಯಾವುದೇ ಸಂದರ್ಭದಲ್ಲಿ 10ಮೀ ಗಿಂತ ಹೆಚ್ಚು ಉದ್ದಕ್ಕೆ ಅಥವಾ ಓಪನ್ ಟ್ರೆಂಚ್ ಮಾದರಿಯಲ್ಲಿ ರಸ್ತೆ ಅಗೆತ ಮಾಡಿದ್ದಲ್ಲಿ ರಸ್ತೆ ಕತ್ತರಿಸುವ ಸಂಸ್ಥೆಗಳಿಂದ ರಸ್ತೆ ಪುನರ್ ನಿರ್ಮಾಣ ಮಾಡಿಸುವುದಲ್ಲದೆ ಪ್ರತಿ ಘಟನೆಗೆ ರೂ.25.00 ಲಕ್ಷದಂಡ ವಿಧಿಸುವುದು.
8. ಪೂರ್ವಾನುಮತಿ ಪಡೆದು ರಸ್ತೆ ಕತ್ತರಿಸಿರುವ ಆದರೆ ಕತ್ತರಿಸಿದ ಭಾಗಗಳ ಪುನರ್ ನಿರ್ಮಾಣ ನಿಗದಿತ ವಿಶಿಷ್ಟ ವಿವರಣೆಯಂತೆ ಮಾಡದಿರುವ ಸಂಸ್ಥೆಗಳಿಂದ ರಸ್ತೆ ಪುನರ್ ನಿರ್ಮಾಣ ಸರಿಯಾಗಿ ಮಾಡಿಸುವುದಲ್ಲದೆ ಮೇಲಿನಂತೆ ನಿಗದಿತ ರಸ್ತೆ ಕತ್ತರಿಸುವ ಶುಲ್ಕದಷ್ಟೇ ದಂಡ ವಸೂಲಿ ಮಾಡುವುದು.
9. ಅಲ್ಲದೆ ಪ್ರಸ್ತುತ ರಸ್ತೆ ಕತ್ತರಿಸುವ ಅನುಮತಿಯನ್ನು ನಿರ್ದಿಷ್ಟ ಕಾಲಮಿತಿಯೊಡನೆ ನೀಡಲಾಗುತ್ತಿದ್ದು ಕಾಲಮಿತಿ ಮೀರಿದ ನಂತರ ಓ.ಎಫ್.ಸಿ ಅಳವಡಿಕೆ ಕೈಗೊಂಡ ಪಕ್ಷದಲ್ಲಿ ಅನಧಿಕೃತ ಅಳವಡಿಕೆಯೆಂದು ಪರಿಗಣಿಸಿ ರಸ್ತೆ ಕತ್ತರಿಸಿರುವ ಸಂಸ್ಥೆಗಳಿಂದ ರಸ್ತೆ ರೂ.25.00 ಲಕ್ಷ ಮತ್ತು ಸಾರ್ವಜನಿಕರಿಗೆ ರೂ.10.00 ಲಕ್ಷ ದಂಡ ವಿಧಿಸುವುದು.
10. ಮೇಲೆ ಪಟ್ಟಿ ಮಾಡಿರುವ ಅಂಶಗಳಿಗೆ ಹೊರತಾಗಿ, ಪರವಾನಗಿಯ ಇತರ ಯಾವುದೇ ಷರತ್ತುಗಳನ್ನು ಉಲ್ಲಂಘಿಸುವ ಸಂಸ್ಥೆಗಳಿಗೆ ಸದರಿ ಅನುಮತಿಗೆ ಪಾವತಿಸಿರುವ ಮೇಲ್ವಿಚಾರಣಾ ಶುಲ್ಕದ 10% ನ್ನು ದಂಡವಾಗಿ ವಿಧಿಸುವುದು.
11. 3 ಬಾರಿಗಿಂತ ಹೆಚ್ಚು ಸಲ ನಿಯಮ ಉಲ್ಲಂಘನೆ ಮಾಡಿ ದಂಡ ವಿಧಿಸಲಾಗಿರುವ ಸಂಸ್ಥೆರವರ ಜೊತೆಗಿನ ಪಾಲಿಕೆಯ ಒಡಂಬಡಿಕೆಯನ್ನು ರದ್ದುಗೊಳಿಸಿ ಸದರಿ ಸಂಸ್ಥೆಯವರನ್ನು ಕಪ್ಪು ಪಟ್ಟಿಗೆ ಸೇರಿಸುವುದು.

12. ಹೆಚ್.ಡಿ.ಡಿ ಮಾದರಿಯಲ್ಲಿ ಓ.ಎಫ್.ಸಿ ಅಳವಡಿಕೆಗಾಗಿ ರಸ್ತೆ ಮತ್ತು ಪಾದಚಾರಿ ಮಾರ್ಗಗಳಲ್ಲಿ ಗುಂಡಿಗಳನ್ನು ತೋಡಲಾಗುತ್ತಿದ್ದು ಓ.ಎಫ್.ಸಿ ಅಳವಡಿಕೆಯ ನಂತರ ಸದರಿ ಗುಂಡಿಗಳ ರಸ್ತೆ ಭಾಗಗಳನ್ನು ಪ್ರಸಕ್ತದಲ್ಲಿ ಸಂಬಂಧಪಟ್ಟ ಸಂಸ್ಥೆಯವರೇ ಪುನರ್ ನಿರ್ಮಿಸುತ್ತಿದ್ದಾರೆ. ರಸ್ತೆ ಪುನರ್ ನಿರ್ಮಾಣದ ಗುಣಮಟ್ಟವನ್ನು ಕಾಯ್ದುಕೊಳ್ಳುವ ಮತ್ತು ನಿಗದಿತ ಕಾಲದಲ್ಲಿ ರಸ್ತೆ ಪುನರ್ ನಿರ್ಮಾಣವನ್ನು ಪೂರ್ಣಗೊಳಿಸುವ ನಿಟ್ಟಿನಲ್ಲಿ ಪಾಲಿಕೆಯೇ ಕೇಂದ್ರೀಕೃತ ವ್ಯವಸ್ಥೆಯಲ್ಲಿ ರಸ್ತೆ ಪುನರ್ ನಿರ್ಮಾಣದ ಜವಾಬ್ದಾರಿಯನ್ನು ವಹಿಸಿಕೊಳ್ಳುವ ಬಗ್ಗೆ ಗುತ್ತಿಗೆದಾರರನ್ನು ನೇಮಿಸುವ ಟೆಂಡರ್ ಪ್ರಕ್ರಿಯೆ ಜಾರಿಯಲ್ಲಿರುತ್ತದೆ. ಸದರಿ ಪ್ರಕ್ರಿಯೆ ಪೂರ್ಣಗೊಂಡ ನಂತರ ರಸ್ತೆ ಪುನಶ್ಚೇತನಕ್ಕೆ ನಿಗದಿಗೊಳಿಸುವ ಶುಲ್ಕವನ್ನು ಸಂಸ್ಥೆಗಳಿಂದ ಅನುಮತಿ ನೀಡುವ ಸಮಯದಲ್ಲೇ ಭರಿಸಿಕೊಂಡು ಪಾಲಿಕೆ ವತಿಯಿಂದಲೇ ರಸ್ತೆ ಭಾಗ ಪುನರ್ ನಿರ್ಮಾಣ ಕೈಗೊಳ್ಳುವುದು. ಅನಧಿಕೃತವಾಗಿ ಭೂಮಿಯ ಮೇಲ್ಭಾಗದಲ್ಲಿ ಅಥವಾ ಭೂಗತವಾಗಿ ಓ.ಎಫ್.ಸಿ ಅಳವಡಿಸಿರುವುದು ಕಂಡು ಬಂದಲ್ಲಿ ಪ್ರತಿ ಮೀಟರಿಗೆ ನಿಗದಿತ ಶುಲ್ಕದ ಮೂರುಪಟ್ಟು ದಂಡ ವಸೂಲು ಮಾಡುವುದು.

ಆಯುಕ್ತರು
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**ಪ್ರತಿ:**

1. ಪೂಜ್ಯ ಮಹಾಪೌರರು ರವರ ಅವಗಾಹನೆಗೆ ತರಲು ಆಪ್ತ ಕಾರ್ಯದರ್ಶಿಯವರಿಗೆ ಕಳುಹಿಸಿದೆ.
2. ಮಾನ್ಯ ಉಪ ಮಹಾಪೌರರು ರವರ ಅವಗಾಹನೆಗೆ ತರಲು ಆಪ್ತ ಕಾರ್ಯದರ್ಶಿಯವರಿಗೆ ಕಳುಹಿಸಿದೆ.
3. ವಿಶೇಷ ಆಯುಕ್ತರು(ಯೋಜನೆ)/ ವಿಶೇಷ ಆಯುಕ್ತರು (ಹಣಕಾಸು) ರವರಿಗೆ ಕಳುಹಿಸಿದೆ.
4. ಎಲ್ಲಾ ವಲಯ ಅಪರ/ ಜಂಟಿ ಆಯುಕ್ತರುಗಳಿಗೆ ಕಳುಹಿಸಿದೆ.
5. ಮುಖ್ಯ ಅಭಿಯಂತರರು (ಓ.ಎಫ್.ಸಿ) ರವರಿಗೆ ಕಳುಹಿಸಿದೆ.
6. ಎಲ್ಲಾ ಮುಖ್ಯ ಅಭಿಯಂತರರು/ ಅಧೀಕ್ಷಕ ಅಭಿಯಂತರರು/ಕಾರ್ಯಪಾಲಕ ಅಭಿಯಂತರರುಗಳಿಗೆ ಕಳುಹಿಸಿದೆ
7. ಕಾನೂನು ಕೋಶದ ಮುಖ್ಯಸ್ಥರಿಗೆ ಕಳುಹಿಸಿದೆ.
8. ಮುಖ್ಯ ಲೆಕ್ಕಾಧಿಕಾರಿಗಳು/ಮುಖ್ಯ ಲೆಕ್ಕಪರಿಶೋಧಕರವರಿಗೆ ಕಳುಹಿಸಿದೆ.
9. ಕೌನ್ಸಿಲ್ ಕಾರ್ಯದರ್ಶಿಯವರಿಗೆ ಕಳುಹಿಸುತ್ತಾ ಎಲ್ಲಾ ಸ್ಥಾಯಿ ಸಮಿತಿ ಅಧ್ಯಕ್ಷರು, ಮಾನ್ಯ ಆಡಳಿತ ಪಕ್ಷದ ನಾಯಕರು ಮತ್ತು ವಿರೋಧ ಪಕ್ಷದ ನಾಯಕರುಗಳಿಗೆ ಕಳುಹಿಸಿಕೊಡಲು ಸೂಚಿಸಿದೆ.
10. ಮಾಹಿತಿ ತಂತ್ರಜ್ಞಾನ ಸಲಹೆಗಾರರು, ಬೃಬೆ.ಮ.ಪಾಲಿಕೆ ರವರಿಗೆ ಕಳುಹಿಸುತ್ತಾ ಪಾಲಿಕೆ ವೆಬ್‌ಸೈಟ್ ನಲ್ಲಿ ಅಳವಡಿಸಲು ಸೂಚಿಸಲಾಗಿದೆ.
11. ಕಛೇರಿ ಕಡತಕ್ಕೆ.

ಅನುಬಂಧ- ೭.

| Statement showing the detils of Service Providers wise, OFC permissions issued from the Year 18/6/2012 to 31-07-2023 | | | | |
|---|---|---|---|---|
| **Sl No** | **Name of the Company** | **Details of permissions** | | |
| | | **Length(Km)** | **Amount in Rs** | **Amount in Lakhs** |
| **1** | **2** | **3** | **4** | **5** |
| **I.Telecom** | | | | |
| 1 | BSNL | 60.43 | 51035790.00 | 510.36 |
| 2 | Reliance Jio Infocomm Limited with permission | 5521.760 | 5508696839 | 55086.97 |
| | Regularised in the year 2014-15,2016-17 & 2017-18 | 1115.520 | | |
| 3 | Reliance Communications Limited | 497.992 | 68657200.00 | 686.57 |
| 4 | Railtel Corporation of India | 33.49 | 28466500 | 284.665 |
| 5 | Bharti Airtel limited | 3293.515 | 2628739588 | 26287.40 |
| | Regularised in the year 2018-19 | 109.560 | | |
| 6 | IDEA Cellular Limited | 199.253 | 178739293.00 | 1787.39 |
| 7 | Vodafone South Limited | 1219.33 | 1032243749.0000 | 10322.44 |
| 8 | Tata Teleservice Limited | 205.73 | 28355091.00 | 283.55 |
| 9 | Tata Communications Limited | 136.430 | 110266411 | 1102.66 |
| 10 | Aircel | 8.090 | 4854000.00 | 48.54 |
| 11 | Defence | 116.422 | 103016289.00 | 1030.16 |
| 12 | Rockline Telecommunication | 0.0 | 4969463.00 | 49.69 |
| | Regularised in the year 2019-20 | 5.053 | | |
| 13 | Dinesh Engineer Limited | 9.188 | 9272542.00 | 92.73 |
| | **Total** | **12531.757** | **9757312755** | **97573.13** |
| **II. Non-Telecom** | | | | |
| 14 | Sterilite Technology Ltd | 37.881 | 17340675.00 | 173.41 |
| 15 | 3G Telecom Infra India Pvt Ltd | 106.20 | 56715225.40 | 567.15 |
| | **Total** | **144.0780** | **74055900** | **740.56** |
| **III. Internet** | | | | |
| 16 | ACT | 860 | 475548665.0 | 4755.49 |
| | Regularised in the year 2017-18 | 555.527 | | |
| 17 | TATA SKY BROADBAND | 231.638 | 6796306.0 | |
| 18 | Lightstorm | 13.468 | 5683162.00 | 56.83 |
| | **Total** | **1661** | **488028133.00** | **4812.32** |
| **IV. Others** | | | | |
| 16 | BESCOM | 109.921 | 93947600 | |
| 17 | BMRCL | 7.317 | 5467750 | |
| 18 | ISRO | 0.95 | 712500 | |
| 19 | NAL | 0.04 | 75000 | |
| 20 | HAL | 0.029 | 24650 | |
| 21 | KPTCL | 41.003 | 42897684 | |
| 22 | Gail India | 39.182 | 38322550 | |
| 23 | Gail Gas | 445.599 | 537344514 | |
| 24 | BMTC | 1.685 | 926250 | |
| 25 | SDE Cable Construction | 0.4 | 150000 | |
| 26 | Garrison Engineer | 5.515 | 4287250 | |
| 27 | IRCON Internation Ltd | 0.12 | 102000 | |
| 28 | Mantri Developers | 1.483 | 1468750 | |
| 29 | BOSCH | 0.017 | 14450 | |

| | | | | |
|---|---|---|---|---|
| 30 | Karle Infra Pvt Ltd | 0.697 | 1670186 | |
| 31 | Qualcomm India Pvt Ltd | 1.25 | 1062500 | |
| 32 | BDA Electrical | 0.8 | 680000 | |
| 33 | ESI | 3.9 | 3315000 | |
| 34 | Chalukya Holiday Resarts | 2.12 | 1802000 | |
| | **Total** | 662.028 | 734270634 | 0.0000 |
| | **Grand Total** | 14998.9690 | 11053667423 | |
| **TENDER SURE Roads** | | | | |
| 1 | M/s. Larsen & Tourbo limited | 0.39 | 658515.00 | 6.59 |
| 2 | 3G Telecom Infra India Pvt | 0.965 | 2033064.00 | 20.33 |
| 3 | M/s. Reliance Jio Infocomm Ltd | 42.191 | 117010575.00 | 1170.11 |
| 4 | M/s. Tata Communications Ltd | 10.183 | 24181968.00 | 210.14 |
| 5 | M/s. Bharti Airtel Limited | 36.34 | 58144550.00 | 406.58 |
| 6 | M/s. Tata Teleservices Ltd | 11.945 | 25267200.00 | 252.67 |
| | **Sub Total** | 102.014 | **227295872.00** | **2066.41** |
| | **Grand Total** | 15100.983 | 11280963295 | |
| **Total length including tender sure** | | **15080.133 Km** | **1126.03 Crs** | |
| **Total length excluding tender sure** | | **14999.969Km** | **1105.3667Crs** | |
| **Tender sure roads** | | **81.164 Km** | **20.98 Crs** | |